ಕೆ.ಆರ್. ಪೇಟೆ ಪುರಸಭೆ ವ್ಯಾಪ್ತಿಯಲ್ಲಿ ನಗರೋತ್ಥಾನ–1ರ ಕಾಮಗಾರಿಗಳು

82 (1832); ಶ್ರೀ ನಾರಾಯಣ ಗೌಡ

ಅ) ಕೆ.ಆರ್. ಪೇಟೆ ಪುರಸಭೆಗೆ ನಗರೋತ್ಥಾನ–1 ರಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);

ಆ) ಈ ಅನುದಾನದಲ್ಲಿ ಮುಕ್ತಾಯವಾಗಿರುವ ಕಾಮಗಾರಿಗಳು ಎಷ್ಟು ಹಾಗೂ ಬಾಕಿ ಇರುವ ಕಾಮಗಾರಿಗಳೆಷ್ಟು? (ಕಾಮಗಾರಿಗಳ ವಿವರ, ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ವಿವರ, ಕಾಮಗಾರಿಗಳ ಅಂದಾಜು ಪಟ್ಟಿ, ಕಾಮಗಾರಿ ನಿರ್ವಹಣೆಯ ವಿವಿಧ ಹಂತಗಳಲ್ಲಿ ತೆಗೆದ ಛಾಯಾಚಿತ್ರಗಳು, ಮೂರನೇ ವ್ಯಕ್ತಿ ತಪಾಸಣೆ ಹಾಗೂ ಚೆಕ್ ಮೆಜರ್‌ಮೆಂಟ್ ಮಾಡಿರುವ ಪ್ರತಿಗಳ ವಿವರ ನೀಡುವುದು)

ಡಾ॥ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ನಗರ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಕೆ.ಆರ್. ಪೇಟೆ ಪುರಸಭೆಗೆ ನಗರೋತ್ಥಾನ 1ನೇ ಹಂತದ ಯೋಜನೆಯಡಿ ₹ 500.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು **ಅನುಬಂಧ–1 ರಲ್ಲಿ** ನೀಡಿದೆ.

ಆ) ಈ ಅನುದಾನದಲ್ಲಿ 28 ಕಾಮಗಾರಿಗಳನ್ನು ಕೈಗೊಂಡಿದ್ದು ಇದರ ಪೈಕಿ 28 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಕಾಮಗಾರಿಗಳ ವಿವರಗಳನ್ನು ಹಾಗೂ ಗುತ್ತಿಗೆದಾರರ ವಿವರಗಳನ್ನು **ಅನುಬಂಧ–1** ರಲ್ಲಿ ನೀಡಿದೆ.

ಕಾಮಗಾರಿಗಳು, ಗುತ್ತಿಗೆದಾರರ ವಿವರಗಳು, ಅಂದಾಜು ಪಟ್ಟಿ, ಕಾಮಗಾರಿ ನಿರ್ವಹಣೆಯ ವಿವಿಧ ಹಂತಗಳಲ್ಲಿ ತೆಗೆದ ಛಾಯಾಚಿತ್ರಗಳು. ಮೂರನೇ ವ್ಯಕ್ತಿ ತಪಾಸಣೆ ವರದಿ ಹಾಗೂ ಚೆಕ್ ಮೆಜರ್‌ಮೆಂಟ್ ಮಾಡಿರುವ ಪ್ರತಿಗಳನ್ನು **ಅನುಬಂಧ–2** ರಲ್ಲಿ ನೀಡಿದೆ.

ಅನುಬಂಧ–1 ಮತ್ತು ಅನುಬಂಧ–2 ರ ದಾಖಲಾತಿಗಳು ಬೃಹತ್ ಪ್ರಮಾಣದಲ್ಲಿರುವುದರಿಂದ, ವಿವರಗಳನ್ನು ಸಿ.ಡಿ. ಯಲ್ಲಿ ಅಳವಡಿಸಿ ನೀಡಲಾಗಿದೆ.

ದಿನಾಂಕ 10.02.2015 ರ ಆರನೇ ಪಟ್ಟಿಯಿಂದ ವರ್ಗಾವಣೆಗೊಂಡ ಶ್ರೀ ನಾರಾಯಣಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂ. 82 (1832)

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ನಾರಾಯಣಗೌಡ:– ಉತ್ತರ ಒದಗಿಸಿದ್ದಾರೆ. ಆದರೆ, 2010–11ನೇ ಸಾಲಿನಲ್ಲಿ ಹಣ ಎಷ್ಟು ಬಿಡುಗಡೆ ಆಗಿದೆ ಎಂದು ಕೇಳಿದಾಗ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ, 5 ಕೋಟಿ ರೂಪಾಯಿಗಳಲ್ಲಿ ತುಂಬಾ ಅವ್ಯವಹಾರವಾಗಿದೆ. ಈಗ ಯಾವುದೇ municipality ಆಗಲಿ, ಪುರಸಭೆ ಆಗಲಿ, 1 ಲಕ್ಷ ರೂಪಾಯಿ ಮೇಲೆ ಏನಾದರೂ ಕೆಲಸ ಮಾಡಬೇಕಾದರೆ. . . .

ಅಧ್ಯಕ್ಷರು:– ಜಯಚಂದ್ರರವರೆ, ಈಗ ಒಂದು ಕೆಲಸ ಮಾಡಿ.

ಆಗಿರುವ ಕೆಲಸ ಏನು ಇದೆ, ಅದು ಸಮರ್ಪಕವಾಗಿ ಆಗಿಲ್ಲವೆಂದು ನೀವು ಹೇಳುತ್ತಿದ್ದೀರಿ, ಅಲ್ಲವೇ?

ಶ್ರೀ ನಾರಾಯಣಗೌಡ:– ತುಂಬಾ ಅವ್ಯವಹಾರವಾಗಿದೆ.

ಅಧ್ಯಕ್ಷರು:– ಅದಕ್ಕೆ ಏನು ಮಾಡಬೇಕು?

ಶ್ರೀ ನಾರಾಯಣಗೌಡ:– ಅದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು:– ಹೇಳಿ.

ಡಾ: ಖಮರುಲ್ ಇಸ್ಲಾಂ:– 5 ಕೋಟಿ ಹಣವನ್ನು 28 ಕೆಲಸಗಳಿಗೆ ನಗರೋತ್ಥಾನ–1 ರಲ್ಲಿ not only released ಕೆಲಸ complete ಆಗಿದೆ. ಎಲ್ಲಾ details photographs ಅನ್ನು ನಾವು ಕೊಟ್ಟಿದ್ದೇವೆ. ಮತ್ತೇನು clarification ಬೇಕಾಗಿದೆ, ತಾವು ನಮಗೆ ಹೇಳಿ, ನಾವು ಉತ್ತರ ಕೊಡುತ್ತೇವೆ. ಎಲ್ಲಾ ಕೊಟ್ಟಿದ್ದೇವೆ. 27 ಕೆಲಸವಾಗಿದೆ. Complete ಆಗಿದೆ. ಎಲ್ಲಾ ಆಗಿದೆ. Third Party Enquiry ಆಗಿದೆ.

ಶ್ರೀ ನಾರಾಯಣಗೌಡ:– ವೋ ಕಾಂ ಅಚ್ಚೇ ತರಫ್‌ಸೆ ನಹೀ ಹುವಾ. ವೋ ಕಾಮ್ ಬಿಲ್‌ಕುಲ್ ಸಹಿ ನಹೀ ಹುವಾ. ಕಾಮ್ ಬರಾಬರ್ ನಹೀ ಹುವಾ, ಯಹ ಬಹುತ್ ಜೋರಿ ಹುವಾ ಹೈ. ಏಕ್ ಲಾಕ್ ಕೆ ವೂಪರ್ ಕಿಸಿಕೋ ಕಾಮ್ ದೇನಾ ತೋ ಟೆಂಡರ್ ಪುಕಾರ್ನ ಪಡ್ತಾ ಹೈ. ಲೆಕಿನ್ ಯಹಾ ಟೆಂಡರ್ ನಹೀ ಬುಲಾಯ ಗಯಾ ಹೈ.

ಅಧ್ಯಕ್ಷರು:– ಕನ್ನಡದಲ್ಲಿ ಅಥವಾ English ನಲ್ಲಿ ಹೇಳಿ. ಹಿಂದಿಯಲ್ಲಿ ಹೇಳಿದರೆ ಇಲ್ಲಿ ಯಾರೂ record ಮಾಡುವುದಿಲ್ಲ. ಈಗ ನಿಮಗೇನು ಮಾಡಬೇಕು ಹೇಳಿ?

ಶ್ರೀ ನಾರಾಯಣಗೌಡ:– ಇದರ ಬಗ್ಗೆ ತನಿಖೆಯಾಗಬೇಕು. ತನಿಖೆಯಾಗಿ ಇದನ್ನು. . . .

ಅಧ್ಯಕ್ಷರು:– ನೋಡಿ. Lot of misuse ಆಗಿದೆ ಅವರು ಹೇಳುತ್ತಾರೆ.

ಶ್ರೀ ನಾರಾಯಣಗೌಡ:– Voucher ಇಲ್ಲದೆ ಲಕ್ಷಾಂತರ ರೂಪಾಯಿಗಳನ್ನು withdraw ಮಾಡಿದ್ದಾರೆ. ನಮ್ಮ ಹತ್ತಿರ evidence ಸಿಕ್ಕಿದೆ. 2010–11 ಮತ್ತು 2011–12ರಲ್ಲಿ ಆದ ಕೆಲಸದ ಬಗ್ಗೆ ನೀವು ತನಿಖೆಯನ್ನು ಮಾಡಿ, ನಮಗೆ ನ್ಯಾಯವನ್ನು ಕೊಡಿಸಬೇಕು ಎಂದು ವಿನಂತಿಸುತ್ತೇನೆ.

ಅಧ್ಯಕ್ಷರು:– ಹೇಳಿ.

ಶ್ರೀ ಖಮರುಲ್ ಇಸ್ಲಾಂ:– DMA ನಿಂದ enquiry ಮಾಡಿ within one month ತಮಗೆ ಹೇಳಬಯಸುತ್ತೇನೆ, ಇನ್ನೂ satisfy ಆಗಿಲ್ಲವೆಂದರೆ, ನಾನು ಖುದ್ದಾಗಿ ನಮ್ಮ ಜೊತೆಯಲ್ಲಿ ಹೋಗಿ ಆ ಕೆಲಸ ನೋಡಿ eqniry ಮಾಡುತ್ತೇನೆ.

ಅಧ್ಯಕ್ಷರು:– Very good.

ಶ್ರೀ ಆರ್. ಅಶೋಕ್:– ಇದು ಅಶೋಕ್ ಪಟ್ಟಣ್‌ರವರ assistance. ಎಲ್ಲದಕ್ಕೂ ಸ್ಥಳಕ್ಕೆ ಹೋಗುತ್ತೇನೆ ಎನ್ನುತ್ತಾರೆ. ಎಲ್ಲಾ ಕಡೆಗೂ ಹೋಗುವುದಕ್ಕೆ ಸಾಧ್ಯವೇ?

ಅಧ್ಯಕ್ಷರು:– Let us see.

ಡಾ॥ ಖಮರುಲ್ ಇಸ್ಲಾಂ:– ಅಶೋಕ್‌ರವರೆ, ಸದಸ್ಯರು ಏನು ಕೇಳಿದ್ದಾರೆ. ಎಲ್ಲಾ ಕೊಟ್ಟಿದ್ದೇವೆ. ಇದು ನಗರೋತ್ಥಾನ–1 ರಲ್ಲಿನ ಕೆಲಸ.

ಅಧ್ಯಕ್ಷರು:– ಅಶೋಕ್‌ರವರೆ, ಇದು e-tender ವ್ಯವಹಾರವಾಗಿದೆ. ನಮ್ಮ municipality ಯಲ್ಲಿ ಇದೇ ಹಣೆಬರಹವಾಗಿದೆ. ಗಲಾಟೆ ಮಾಡಿ ಈಗ ಶುರು ಮಾಡಿದ್ದಾರೆ. ಅವರು ಬರುತ್ತಾರೆ, ಹೋಗುತ್ತಾರೆ. ಯಾರಿಗೋ sub contract ಕೊಟ್ಟಿದ್ದಾರೆ. ಅವರೂ ಬರುವುದಿಲ್ಲ. ಇಲ್ಲಿ ವಿಪರೀತ ದುಡ್ಡು, ಎಲ್ಲಾ municipalities ಗೆ ಕೊಟ್ಟಿದ್ದು ಇವತ್ತಿನವರೆಗೆ ಖರ್ಚು ಆಗಿಲ್ಲ. ಯಾರಾದರೂ seriousness ಆಗಿ ತೆಗೆದುಕೊಂಡು ಇದರ ಬಗ್ಗೆ review ಮಾಡಿ, ಏನು ಆಗಿದೆ ಎಂದು ನೋಡಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಹಿಂದೆ ಎಲ್ಲಾ package tender ಎಂದು ಮಾಡಿಬಿಟ್ಟರು. ಒಟ್ಟೊಟ್ಟಿಗೆ ಜಿಲ್ಲೆಯದು package ತೆಗೆದುಕೊಂಡವನು ಅವನ್ಯಾರೂ ಊರಿಗೆ ಬರಲಿಲ್ಲ. ಹಿಂದೆ ಆಗಿರುವುದಕ್ಕೆ ನಾವು ಈಗ ಆರೋಪ ಹೊರಬೇಕಾಗಿದೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಇದರಲ್ಲಿ state ನಲ್ಲಿ ನಿಜವಾಗಲೂ ಬಹಳ ದೊಡ್ಡ scandal ಆಗಿದೆ. 2012 ರಲ್ಲಿ state-wise package ಏನು ಮಾಡಿದರು, ಆ ಎಲ್ಲಾ contractors ಕಳಪೆ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರವಾಗಿರುವುದರಿಂದ ಇದರ ಬಗ್ಗೆ ತನಿಖೆಯಾಗಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇದು ನಗರೋತ್ಥಾನ ಯೋಜನೆಯಲ್ಲಿ ಮಾಡಿದ್ದು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಅವರು ಹೇಳಿರುವುದರಲ್ಲಿ ಸತ್ಯವಿದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ನಾನೂ ಕೂಡ ನೂರಾರು ಬಾರಿ ಈ ಸದನದಲ್ಲಿ ಹೇಳಿದ್ದೇನೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– 'ನಗರೋತ್ಥಾನ ಯೋಜನೆ' ಬಿಜೆಪಿ ಸರಕಾರ ತಂದಂಥ ಯೋಜನೆ. ಸಾಲ ತೆಗೆದು ಒಳ್ಳೆಯ ದುಡ್ಡು ಕೊಟ್ಟರು. ಆಗ ಏನು ಮಾಡಿದರು ಎಂದರೆ, tender ಕರೆಯುವಾಗ package ಮಾಡಿ, ಜಿಲ್ಲೆ–ಜಿಲ್ಲೆಗೆ package ಮಾಡಿದರು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಮಾಡಲಿ ತಪ್ಪೇನಿಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಆ ಜಿಲ್ಲೆಗೆ package ಮಾಡಿದಾಗ ಏನಾಯಿತು ಎಂದರೆ ಅವನು ಎಲ್ಲೋ ಕುಳಿತು tender ಹಾಕಿಕೊಂಡ. ಈಗ ಯಾರಿಗೋ ಸ್ಥಳೀಯರಿಗೆ ಕೊಟ್ಟಿದ್ದಾನೆ. Tender ತೆಗೆದುಕೊಂಡು 4 ವರ್ಷಗಳಾದವು, ಇನ್ನೂ ನಮ್ಮ ಅರಸೀಕೆರೆ ಊರೊಳಗೆ ಆ contractor ಬಂದಿಲ್ಲ. Agreement ಮಾಡಿಕೊಂಡಿದ್ದಾನೆ. ಅವನಿಗೆ ಯಾರು ಹೇಳುವವರಿಲ್ಲ, ಕೇಳುವವರಿಲ್ಲ. ಏಕೆ ಹೀಗೆ ಬಿಡಬೇಕು?

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಅವರು ಉತ್ತರ ಕೊಡುವಾಗಲೂ ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ನಾರಾಯಣಗೌಡ:– Tender ಮಾತ್ರ class-1, ಕೆಲಸ ಮಾತ್ರ ಸೊನ್ನೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇದರ ಬಗ್ಗೆ ಸರ್ಕಾರ ಗಮನ ಹರಿಸುವುದಿಲ್ಲ. ಏಕೆಂದು ಗೊತ್ತಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– ಒಂದು ನಿಮಿಷ, ಕಾನೂನು ಸಚಿವರೆ..

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– It is a matter of very serious. ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ಇದರಲ್ಲಿ ಅಡಗಿದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– 7–8 ಜಿಲ್ಲೆಗಳ tender ಒಬ್ಬನೇ contractor ಗೆ ಆಗಿದೆ. ಆಮೇಲೆ ಅವನೇನು ಮಾಡಿದ ಎಂದರೆ, ಅದನ್ನು ಮಾಡುವುದಕ್ಕೆ ಆಗದೆ, class-1 contractor ತೆಗೆದುಕೊಂಡಿರತಕ್ಕಂಥ ಕೆಲಸವನ್ನು local ನಲ್ಲಿರತಕ್ಕಂಥ ಸಣ್ಣ ಪುಟ್ಟ contractor ರವರಿಗೆಲ್ಲಾ ಕೊಟ್ಟ. ಕೆಲಸ ಅರ್ಧಂಬರ್ಧ ಮಾಡಿ ಹಾಗೇ ಹೊರಟು ಹೋದ. ಮೊನ್ನೆ ಸರ್ಕಾರವು ನನಗೆ ಉತ್ತರ ಕೊಟ್ಟಿದೆ. ಕಡೂರು ನಗರೋತ್ಥಾನಕ್ಕೆ (ಗೊಂದಲ) ಅದರೊಳಗೆ ದುಡ್ಡು ಕೊಟ್ಟಿಲ್ಲ ಕೆಲಸ ನಿಂತಿದೆ ಎಂದು ಸರ್ಕಾರ ಉತ್ತರಿಸಿದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅಂದಿನ SR, ಇಂದಿನ ಮರಳಿನ rate, ಇಂದಿನ cement rate ಎಲ್ಲಾ ಜಾಸ್ತಿಯಾಗಿದೆ, ಅವನು ಕೆಲಸ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಬಹಳ ಅವ್ಯವಹಾರ ನಡೆದಿದೆ ಎನ್ನುವುದಕ್ಕಿಂತ ಕೆಲಸವೇ ಪ್ರಾರಂಭವಾಗಿಲ್ಲ.

(ಗೊಂದಲ)

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡಿ. Cabinet ನಲ್ಲಿ ಈ ಬಗ್ಗೆ over all enquiry ಮಾಡುವುದಕ್ಕೆ decision ತೆಗೆದುಕೊಂಡು ಮಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ದತ್ತಾರವರು ಹೇಳಿದ ಹಾಗೆ, cabinet ನಲ್ಲಿ ಈ ವಿಚಾರವಾಗಿ ಸವಿಸ್ತಾರವಾಗಿ ಚರ್ಚೆಯಾಯಿತು. ಮೊದಲು Division-wise tender ಮಾಡಿದರು. ಕೆಲವು ಕಡೆ district-wise tender ಮಾಡಿದರು. ಈ ರೀತಿಯಾಗಿ ಎಲ್ಲಾ club ಮಾಡಿ cluster approach type ಮಾಡಿದ್ದರಿಂದ ಈ ದುರಂತಕ್ಕೆ ಕಾರಣವಾಯಿತು. ಒಂದು ಕಡೆ ಕೆಲಸ ಪ್ರಾರಂಭವಾಗಿ, ಅರ್ಧಂಬರ್ಧವಾಗಿ ಬಿಟ್ಟು ಹೋಗಿದೆ, ಯಾವ ರೀತಿ repair ಮಾಡದಿರತಕ್ಕಂಥ ಪರಿಸ್ಥಿತಿ ಇದೆ. ಇತ್ತೀಚೆಗೆ ಕೆಲವು delay ಆಗಿರತಕ್ಕಂಥ ಪ್ರಸ್ತಾಪಗಳು ಬಂತು. ಅವುಗಳನ್ನೆಲ್ಲಾ ನಾವು ತಾಲ್ಲೂಕು wise ಮಾಡಿದೆವು.

ಉದಾಹರಣೆಗೆ, ತುಮಕೂರಿನಲ್ಲಿ ತಾಲ್ಲೂಕು wise ಮಾಡಿದೆವು. ಏಕೆಂದರೆ ಕಹಿ ಅನುಭವ ಆಧಾರದ ಮೇಲೆ ತಾಲ್ಲೂಕು wise ಮಾಡಿದೆವು ಈಗೆಲ್ಲಾ ಕೆಲಸ ಪ್ರಾರಂಭವಾಗುವ ಮಟ್ಟಕ್ಕೆ ಬಂದಿದೆ. ಈಗ ಏನಾಗಿದೆ ಎಂದರೆ, ಕೆಲಸ ಎಲ್ಲಾ entrust ಆಗಿಬಿಟ್ಟಿದೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಸ್ವಾಮಿ ಇವುಗಳನ್ನು ರದ್ದು ಮಾಡಿ, ತಾಲ್ಲೂಕು wise ಮಾಡಿ, ಈಗಿನ SR rate ಗೆ ಅವನ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಇದರಲ್ಲಿ ಲೋಪದೋಷ ಏನಾಗಿದೆ ಎನ್ನುವುದನ್ನು ನೋಡಿ, ಸಮಗ್ರವಾಗಿ ಯೋಚಿಸಿ, ಅದನ್ನು ವಾಪಸ್ ಮಾಡಿ ಮಾಡುವುದಕ್ಕೆ ಸಾಧ್ಯವೇ ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡುತ್ತೇವೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಇದನ್ನು ಲೋಕಾಯುಕ್ತಕ್ಕೆ ವಹಿಸುತ್ತೀರಾ?

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಈ tender ಗಳನ್ನು ರದ್ದು ಮಾಡಿ ತಾಲ್ಲೂಕುವಾರು re-tender ಕರೆಯಿರಿ.

(ಗೊಂದಲ)

ಅಧ್ಯಕ್ಷರು:– ಆಯಿತು ಸುಮ್ಮನಿರಿ. ನೋಡಿ, ಈ ಬಗ್ಗೆ serious ಆಗಿ ಕುಳಿತುಕೊಂಡು ಚರ್ಚೆ ಮಾಡಿ, ಇದಕ್ಕೊಂದು ಪರಿಹಾರ ಮಾಡಿ. Large scale ನಲ್ಲಿ ಈ ತರಹ misuse ಆಗಿದೆ, ಅಧಿಕಾರ ದುರುಪಯೋಗವಾಗಿದೆ

ಎಂದು ಹೇಳಿದ್ದಾರೆ. ನೀವು ಅಧಿಕಾರಕ್ಕೆ ಬಂದು ಎರಡು ವರ್ಷಗಳಾದವು, ನೀವು ಇದನ್ನು tolerate ಮಾಡುತ್ತೀರಾ? ಇದನ್ನು ನೋಡುವುದು ಬೇಡವೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಅಧ್ಯಕ್ಷರೆ, ಎರಡು ವರ್ಷಗಳ ಹಿಂದೆ ಕೇಳಿದ್ದರಲ್ಲಿ problem ಆಗಿದೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಯಾವ ಸರ್ಕಾರವೇ ಇರಲಿ, ಮಂತ್ರಿಗಳೇ ಇರಲಿ, ಯಾವ ಸರ್ಕಾರ ಇದನ್ನು ಮಾಡಿದೆ? ಎನ್ನುವ ಪ್ರಶ್ನೆಯಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಎರಡು ವರ್ಷಗಳ ಹಿಂದೆ ಆಗಿರುವುದು. ಈಗೆಲ್ಲಾ ಕೆಲಸ entrust ಆಗಿಬಿಟ್ಟಿದೆ. ಕೆಲಸವೂ ಅರ್ಧಂಬರ್ಧವಾಗಿಬಿಟ್ಟಿದೆ.

(ಗೊಂದಲ)

ಅಧ್ಯಕ್ಷರು:– ಅದೆಲ್ಲಾ ಸರಿ. ಯಾವ time ನಲ್ಲಿ complete ಆಗಬೇಕಾಗಿತ್ತೋ ಏಕೆ complete ಆಗಿಲ್ಲ? ಆಗಿರುವ ಕಡೆ ಅನೇಕ misuse ಆಗಿದೆ ಮತ್ತು bad quality ಆಗಿದೆ, ಇದರ ಮೇಲೆ ಸಮಗ್ರವಾಗಿ ತನಿಖೆ ಮಾಡಿ, ಬೇರೆಯವರಿಗೆ ಕೊಟ್ಟು ಮಾಡುವುದಕ್ಕೆ ಬರುವುದಿಲ್ಲವೇ?

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಅವರು package ಮಾಡಿ tender ಕರೆದು ಹೋದರು, work order ಕೊಟ್ಟವರು ನಿಮ್ಮ ಸರ್ಕಾರದವರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– Positively, I am assuring, we will hold an enquiry and we will look into it personally, ಅದನ್ನು ನಾವು ಯಾವ ರೀತಿಯಾಗಿ re-tender ಮಾಡಬಹುದು ಅಥವಾ ಏನು ಮಾಡಬೇಕು ಎಂಬುದರ ಬಗ್ಗೆ ನಾವು ಯೋಚನೆ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:– ಏಕೆಂದರೆ, ಪುರಸಭೆಗಳಿಗೆ ಇಷ್ಟಿಷ್ಟು ಹಣ ಸಿಕ್ಕುವುದು ಬಹಳ ಕಷ್ಟ. ಏನೋ ಅಪರೂಪಕ್ಕೆ ಸಿಕ್ಕಿದೆ, ಸಣ್ಣ ಸಣ್ಣ municipalities 5 ಕೋಟಿ ರೂಪಾಯಿಗಳೆಂದರೆ, ಇದೇನು ಕಡಿಮೆ ದುಡ್ಡೇ? ಆದ್ದರಿಂದ, ಇದನ್ನು ದಯವಿಟ್ಟು set right ಮಾಡಿ, ಯಾವನು ಇದ್ದಾನೋ, ಅವನನ್ನು ಹಿಡಿದು ಬಲಿ ಹಾಕುವಂಥ ಕೆಲಸ ಮಾಡಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಸಹಾಯಕ್ಕೆ ಬರಬೇಕು.

(ಗೊಂದಲ)

ಶ್ರೀ ನಾರಾಯಣಗೌಡ:– ಮಾನ್ಯ ಅಧ್ಯಕ್ಷರೆ, ನಮ್ಮ ಸಚಿವರು ಹೇಳುತ್ತಿದ್ದರಲ್ಲ. ಈಗಲೂ ಪುರಸಭೆಯಲ್ಲಿ ಸುಧಾರಣೆಯಾಗಿಲ್ಲ. ಇದನ್ನು ತಾವು ಗಮನಿಸಬೇಕಾಗಿದೆ.

(ಗೊಂದಲ)

ಅಧ್ಯಕ್ಷರು:– ಇದಕ್ಕೆಲ್ಲಾ ನಾನು ಏನು ಹೇಳುತ್ತೇನೆಂದರೆ, ಆಯಾ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳೇ ಎಲ್ಲಾ ಪುರಸಭೆಗಳಿಗೆ ಜವಾಬ್ದಾರರು, ಹೌದಲ್ಲವೇ? ಇವರೇನು ಮಾಡುತ್ತಾರೆ?

(ಗೊಂದಲ)

ಶ್ರೀ ನಾರಾಯಣಗೌಡ:– ನಾವು ಜಿಲ್ಲಾಧಿಕಾರಿಗಳ ಹತ್ತಿರ ಹತ್ತು ಸಾರಿ ಹೋಗಿದ್ದೇವೆ.

(ಗೊಂದಲ)

ಶ್ರೀ ಟಿ. ವೆಂಕಟರಮಣಯ್ಯ:– ನಮ್ಮ ದೊಡ್ಡಬಳ್ಳಾಪುರದಲ್ಲಿಯೂ ಕೂಡ UGD ಮತ್ತು ನಗರೋತ್ಥಾನ ಯೋಜನೆಯಲ್ಲಿ SR rate ನಲ್ಲಿ ಮಾಡಲಿಕ್ಕೆ...

(ಗೊಂದಲ)

ಅಧ್ಯಕ್ಷರು:– ಒಂದು ನಿಮಿಷ ಸ್ವಲ್ಪ ತಾಳಿ. 'ರಾಜ್ಯದ ಸಮಸ್ತ ನಾಗರೀಕರ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಜನಪರ, ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತ ನೀಡಲು ನನ್ನ ಸರ್ಕಾರ ಬದ್ಧವಾಗಿದೆ.' ಎಂದು ಸರ್ಕಾರದವರು ಹೇಳಿದ್ದೀರಿ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಇದು 2012 ರಲ್ಲಿ ಆಗಿರತಕ್ಕಂಥದ್ದು. Law Minister ರವರು ಹೇಳಿದ್ದಾರೆ, ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿ. . .

(ಗೊಂದಲ)

HON'BLE SPEAKER:- The Deputy Commissioner should be sacked.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಎಲ್ಲೆಲ್ಲಿ ಲೋಪವಾಗಿದೆ, ಸಮಗ್ರವಾಗಿ ತನಿಖೆ ಮಾಡಿ, Government will take a stringent action ಎಂದು ಹೇಳಿದ್ದಾರೆ. If it has happened, Government will look into all these aspects

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:– Work order ಕೊಟ್ಟವರು ಇವರು.

(ಗೊಂದಲ)

ಶ್ರೀ ನಾರಾಯಣಗೌಡ:– ನೂರು ಸಾರಿ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿದ್ದೇವೆ. ಲಿಖಿತ ರೂಪದಲ್ಲಿ ಕೊಟ್ಟರು ಏನೂ ಆಗಿಲ್ಲ.

(ಗೊಂದಲ)

ಅಧ್ಯಕ್ಷರು:– ರೀ ಸ್ವಾಮಿ, ಒಬ್ಬೊಬ್ಬರೇ ಮಾತನಾಡ್ರಿ, ಏನಾಗಿದೆ ನಿಮಗೆ?

(ಗೊಂದಲ)

ಶ್ರೀ ಬಿ.ಬಿ. ನಿಂಗಯ್ಯ:– ಎಲ್ಲರದ್ದೂ ಒಂದೇ ಸಮಸ್ಯೆಯಾಗಿದೆ.

ಡಾ: ಹೆಚ್.ಸಿ. ಮಹದೇವಪ್ಪ:– ಸರಕಾರದ ಕಾಮಗಾರಿಗಳು ಯಾವುದೇ ವಿಭಾಗದಲ್ಲಿ ನಡೆಯುವಾಗ ಕಳಪೆ ಗುಣಮಟ್ಟದಲ್ಲಿದ್ದರೆ ಅಥವಾ ಅದರಲ್ಲಿ ಅವ್ಯವಹಾರವಾಗಿದ್ದರೆ, ಅದನ್ನೆಲ್ಲಾ ಪರಿಶೀಲನೆ ಮಾಡಿ, ತನಿಖೆ ಮಾಡಿ, ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಯಾರಿಂದ ತನಿಖೆ ಮಾಡಿಸುತ್ತೀರಿ?

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:– ಕಳಪೆಯಾಗಿದ್ದರೆ, enquiry ಮಾಡಿ, ಯಾವ contractor ತೆಗೆದುಕೊಂಡಿದ್ದಾರೆ, ಅವರ ಮೇಲೆ action ತೆಗೆದುಕೊಳ್ಳಿ. Recovery ಮಾಡಿ. ಅವನನ್ನು ಕಪ್ಪು ಪಟ್ಟಿಯಲ್ಲಿಡಿ.

(ಗೊಂದಲ)

DR. H.C. MAHADEVAPPA:- We will see to it. It is thoroughly looked into.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:– ಎರೆಡು ವರ್ಷಗಳಿಂದಲೂ ಈ ಸದನದಲ್ಲಿ ಚರ್ಚೆಯಾಗುತ್ತಿದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಖಮರುಲ್ಲಾ ಇಸ್ಲಾಂ ರವರಿಗೆ ತಮ್ಮ ಮೂಲಕ ಹೇಳುತ್ತಿರುವುದೇನೆಂದರೆ, ತಾವೇ ಮುತುವರ್ಜಿವಹಿಸಿ, ನೀವು ಎಲ್ಲಾ ಜಿಲ್ಲಾಧಿಕಾರಿಗಳನ್ನು ಕರೆಯಿರಿ, ಏಕೆಂದರೆ, ಪುರಸಭೆಗಳಿಗೆಲ್ಲಾ ಅವರೇ head.

(ಗೊಂದಲ)

ಶ್ರೀ ನಾರಾಯಣಗೌಡ:– PDO ಗಳು ಏನೂ ನೋಡುವುದಿಲ್ಲ. ಸರ್ಕಾರ PDO ಗಳನ್ನು appoint ಮಾಡಿದೆ.

(ಗೊಂದಲ)

ಅಧ್ಯಕ್ಷರು:– ನೀವು PDO ಗಳೆಂದು ಹೇಳುತ್ತೀರಲ್ಲಾ, ನಮ್ಮ ಜಿಲ್ಲೆಯಲ್ಲೊಬ್ಬ PDO ಇದ್ದಾನೆ, ಮೊದಲು ಅವನನ್ನು ತೆಗೆದು ಹಾಕಿ.

(ಗೊಂದಲ)

ಶ್ರೀ ನಾರಾಯಣಗೌಡ:– Nothing doing. . . ಅಲ್ಲಿ PDO ಗಳು ಏನೂ ಮಾಡುತ್ತಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಅಲ್ಲಿ Assistant Engineers ಇಲ್ಲ. ಕೆಲವು ಕಡೆ project director ಗಳು ಇಲ್ಲ. ಹೀಗಾಗಿ ದುಡ್ಡು ಬಳಕೆಯಾಗಿಲ್ಲವೆಂದು ಹೇಳುತ್ತಾರೆ. ದಯವಿಟ್ಟು..

(ಗೊಂದಲ)

ಅಧ್ಯಕ್ಷರು:– ದತ್ತಾರವರೆ, ಅವರು ಒಪ್ಪಿದ್ದಾರೆ ಬಿಡಿ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಮಂತ್ರಿಗಳು ಹೇಳಿಯಾಯಿತಲ್ಲ.

(ಗೊಂದಲ)

ಶ್ರೀ ನಾರಾಯಣಗೌಡ:– ಕುಡಿಯುವ ನೀರಿನ ವಿಚಾರವಂತೂ ಮಾತನಾಡುವ ಹಾಗೆ ಇಲ್ಲ. Bleaching powder ಬರುತ್ತದೆ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:– ಮಾನ್ಯ ಮಂತ್ರಿಗಳೇ ಇದು ಭರವಸೆಯಾಗಿ ಉಳಿಯಬಾರದು. ಮುಂದಿನ ಮಾರ್ಚ್‌ನಲ್ಲಿ ನಡೆಯುವ ಬಜೆಟ್ ಅಧಿವೇಶನದಲ್ಲಿ ಇದರ ಬಗ್ಗೆ ಸ್ಪಷ್ಟವಾದ ವರದಿ ಕೊಡಿ ಅಥವಾ ಒಂದು statement ಮಾಡಿ, ಇಲ್ಲದಿದ್ದರೆ ಇದು ಆಗುವುದಿಲ್ಲ, ಮತ್ತೆ ಚರ್ಚೆ ಮಾಡುವುದು ಆಗುತ್ತದೆ.

(ಗೊಂದಲ)

ಅಧ್ಯಕ್ಷರು:– ಆಗ ಒಂದು ವರದಿ ಮಂಡಿಸಿ.

(ಗೊಂದಲ)

ಶ್ರೀ ನಾರಾಯಣಗೌಡ:– tender ಆಗಿರುವ bid ದಾರರಿಗೆ ಯಾವ್ಯಾವ item ತರಬೇಕೆಂದು..

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಎಲ್ಲೆಲ್ಲಿ ಈ ತರಹದ ವ್ಯವಹಾರಗಳಾಗಿವೆ, ಅದರ ಬಗ್ಗೆ ಸಮಗ್ರವಾಗಿ ವರದಿ ತರಿಸಿಕೊಂಡು

ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಬದ್ದವಿದೆ ಎಂದು ಹೇಳಿದ್ದೇವೆ. ತೆರಿಗೆದಾರರ ಹಣ ಸರಿಯಾಗಿ ಉಪಯೋಗವಾಗಬೇಕು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಯಾರಿಂದ ತನಿಖೆ ಮಾಡಿಸುತ್ತೀರಿ? ಅಲ್ಲಿ ಸಾಕಷ್ಟು ಭ್ರಷ್ಟಾಚಾರವಾಗಿದೆ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಅವರು ಕೆ.ಆರ್. ಪೇಟೆ ಪುರಸಭೆಯಲ್ಲಿ ಕಾಮಗಾರಿಗಳು ಕಳಪೆಯಾಗಿವೆಯೆಂದು ಹೇಳಿದ್ದಾರೆ. DMA ಯಿಂದ ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಎಲ್ಲೆಲ್ಲಿ ಈ ತರಹ ಸರಿಯಾದ ಕಾಮಗಾರಿ ಆಗಿಲ್ಲವೋ ಅಲ್ಲೆಲ್ಲಾ ತನಿಖೆ ಮಾಡಿ, ವರದಿ ಸಲ್ಲಿಸಲು ಕ್ರಮ ತೆಗೆದುಕೊಳ್ಳುತ್ತೇನೆಂದು ಸಂಬಂಧಪಟ್ಟ ಸಚಿವರೇ ಹೇಳಿದ್ದಾರೆ. ಸರ್ಕಾರ ಬದ್ಧವಾಗಿದೆ.

(ಗೊಂದಲ)

ಅಧ್ಯಕ್ಷರು:– ಒಂದು ನಿಮಿಷ, ಅವರು ಏನು ಹೇಳುತ್ತಾರೆ ಕೇಳಿ.

(ಗೊಂದಲ)

ಶ್ರೀ ನಾರಾಯಣಗೌಡ:– ಮಾನ್ಯ ಸಚಿವರೆ, ಅಲ್ಲಿ bleaching powder ನೊಡನೆ ಕೂಡಿಕೊಂಡು ಬರುವ filter ನೀರನ್ನು ನೋಡಿದರೆ, ಕುಡಿಯುವುದಕ್ಕೆ ಅಲ್ಲ ಸ್ನಾನ ಮಾಡುವುದಕ್ಕಾಗುವುದಿಲ್ಲ. ಆ Bleaching powder ಕೂಡ duplicate ಬರುತ್ತದೆ.

ಅಧ್ಯಕ್ಷರು:– ಕುಡಿಯುವ ನೀರಿನ ವಿಚಾರಕ್ಕೆ ಹೋಗಬೇಡಿ, ಈ ವಿಚಾರಕ್ಕೆ ಹೇಳ್ರೀ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಕಳಪೆ ಕಾಮಗಾರಿಯಾಗಿದೆ, ಆ bill ಹಿಡಿಯಿರಿ ಎಂದು ಹೇಳಿದರೆ ಇತರ Minister office ನಿಂದ ಯಾರ phone ಮಾಡಿ, ಆ bill ಕೊಡದಿದ್ದರೆ suspend ಮಾಡುತ್ತೇನೆಂದು Chief officer ಗೆ ಧಮಕಿ ಕೊಡುತ್ತಾರೆ. ಈ ವ್ಯವಸ್ಥೆ ಈ ರಾಜ್ಯದಲ್ಲಿ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು:– ಈ ಕಾರ್ಯಕ್ರಮದ ಬಗ್ಗೆ ಹೇಳ್ರಿ.

(ಗೊಂದಲ)

ಶ್ರೀ ನಾರಾಯಣಗೌಡ:– ಅದೂ ಪುರಸಭೆಯಲ್ಲಿ ಬರುತ್ತದೆ.

(ಗೊಂದಲ)

ಅಧ್ಯಕ್ಷರು:– ಅದು ಹಾಗಲ್ಲ, ಈ ನಗರೋತ್ಥಾನ ಕಾರ್ಯಕ್ರಮದ ಬಗ್ಗೆ ಹೇಳಿ.

(ಗೊಂದಲ)

ಶ್ರೀ ನಾರಾಯಣಗೌಡ:– ಆ ಭಾಗಕ್ಕೆ ಕುಡಿಯುವ ನೀರು ಪೂರೈಸುವುದು ಸಹಾ ನಗರೋತ್ಥಾನ ಕಾರ್ಯಕ್ರಮದಡಿಯಲ್ಲಿ ಬರುತ್ತದೆ.

(ಗೊಂದಲ)

ಅಧ್ಯಕ್ಷರು:– ನಗರೋತ್ಥಾನ ಕಾರ್ಯಕ್ರಮದಲ್ಲಿ ಅದು ಸೇರಿದೆಯೆ?

(ಗೊಂದಲ)

ಶ್ರೀ ನಾರಾಯಣಗೌಡ:– ಹೌದು, ಅದು ಸೇರಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ನಾರಾಯಣಗೌಡರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ನಗರೋತ್ಥಾನ work ಬೇರೆ, ಅದು ಬೇರೆ.

(ಗೊಂದಲ)

ಶ್ರೀ ನಾರಾಯಣಗೌಡ:– ಅದು ಇವರ maintenance ನಲ್ಲಿ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ನಾರಾಯಣಗೌಡರೆ, ನಗರೋತ್ಥಾನ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 5 ಕೋಟಿ ರೂಪಾಯಿಗಳ ಕಾರ್ಯಕ್ರಮದ್ದು ಒಂದು ಪಟ್ಟಿ ಇದೆ. ಅದರಲ್ಲಿ ಈ ಕುಡಿಯುವ ನೀರಿನ ಕಾರ್ಯಕ್ರಮ ಸೇರಿದೆಯೋ, ಇಲ್ಲವೋ ಎಂಬುವುದನ್ನು ತಾವು ನೋಡಿಕೊಳ್ಳಿ. ಸಾಮಾನ್ಯವಾಗಿ ಅದು ಸೇರುವುದಿಲ್ಲ. ಇದನ್ನು ಯೋಚನೆ ಮಾಡಿ.

ಡಾ: ಹೆಚ್.ಸಿ. ಮಹದೇವಪ್ಪ:– ಆಯಿತು, ಈ ಬಗ್ಗೆ ಹೇಳಿದ್ದೇವಲ್ಲಾ.

ಡಾ॥ ಖಮರುಲ್ ಇಸ್ಲಾಂ (ಪೌರಾಡಳಿತ, ಪುರಸಭೆ, ನಗರಸಭೆ, ಪಟ್ಟಣ ಪಂಚಾಯಿತಿ, ಸಾರ್ವಜನಿಕ ಉದ್ಯಮಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು):– Out of the Nagarothaana, some amount was given to some of the ULB's for UGD and water. UGD ಸಲುವಾಗಿ ಕೆಲಸ ಆಗಲಿಲ್ಲವೆಂದರೆ, ಈ contractor ಕೆಲಸವನ್ನು ಪ್ರಾರಂಭ ಮಾಡುತ್ತಾ ಇಲ್ಲ. Secondly, ನಾವು 2–3 ಸಲ ಹೋದ ಮೇಲೆ, ಅಲ್ಲಿ ಲೈಟ್ ಕಂಬ, ಡ್ರೈನ್ they will not allow the contactors to work. They say many a times, even ಬಸವರಾಜ ಬೊಮ್ಮಾಯಿಯವರು ಹೇಳಿರುವ ಕೆಲಸದಲ್ಲಿ ನಾವು ಕೇಳಿದ್ದೇವೆ. ಡಿ.ಸಿ. ಯವರ ಜೊತೆಯಲ್ಲಿ ಮಾತನಾಡಿದ್ದೇವೆ. He has completed and his bill was pending about ₹ 10 crores. He has said not to pay till the total work is done. ಈ ತರಹ ಆಗಿದೆ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಸಚಿವರು ಇಡೀ ಜಿಲ್ಲೆಯ ಬಗ್ಗೆ ಹೇಳುತ್ತಿದ್ದಾರೆ.

ಡಾ॥ ಖಮರುಲ್ ಇಸ್ಲಾಂ:– ನಾನು ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ಆ construction ಗೆ 2,000 ರಿಂದ 3,000 ರೂ. ವರೆಗೆ ಕೆಲಸ ಮಾಡಿ ಬಿಲ್ ಕೇಳುತ್ತಿದ್ದಾರೆ. 15 ಕೋಟಿ ರೂಪಾಯಿಗಳ ಕೆಲಸ ಆದ ಮೇಲೆ, ನಾನು ಕೇಳಿದೆ, District Incharge Minister ಮತ್ತು MLA Meetıng ತೆಗೆದುಕೊಂಡಿದ್ದಾರೆ, ಪೂರ್ತಿ ಕೆಲಸ ಮಾಡಿ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಮೀಟಿಂಗ್‌ನಲ್ಲಿ ಏನು ಆಗಿದೆ? ಇಲ್ಲಿ ಮಹದೇವಪ್ರಸಾದ್‌ರವರು ಇದ್ದಾರೆ. ಆ ಮೀಟಿಂಗ್‌ನಲ್ಲಿ ಏನು ಗಲಾಟೆಯಾಯಿತು? ಎಂದು ತಾವು ಕೇಳಿ.

(ಗೊಂದಲ)

ಡಾ॥ ಖಮರುಲ್ ಇಸ್ಲಾಂ:– UGD work is completed.. . . in time ಕೆಲಸ ಮಾಡಿ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಅಲ್ಲಿಗೆ ಬಂದಿದ್ದ ಎಂಎಲ್‌ಎಗಳು ಏನು ಹೇಳಿದ್ದಾರೆಂದು ಕೇಳಿ. ಅವನು ಎಲ್ಲಾ ಕೆಲಸವನ್ನು ಅರ್ಧಂಬರ್ಧ ಮಾಡುತ್ತಾನೆ, ಇರುವಂತಹ ರಸ್ತೆಯನ್ನೂ ಕಿತ್ತುಹಾಕಿದ್ದಾನೆ. ಅವನು ಕೆಲಸ ಮಾಡಲು ತಯಾರಿಲ್ಲ. ಇವರು ಅವರ ಪರವಾಗಿ ಹೇಳುತ್ತಿದ್ದಾರೆ.

ಅಧ್ಯಕ್ಷರು:– ಮಾನ್ಯ ಸಚಿವರು ಏನು ಹೇಳುತ್ತಾರೆ ಅದನ್ನು ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ:– ಹೀಗಾಗಿಯೇ ಆ ಕೆಲಸ ಆಗಿರುವುದು. ಅಲ್ಲಿರುವಂತಹ ground reality ಯೇ ಬೇರೆಯಾಗಿದೆ.

ಅಧ್ಯಕ್ಷರು:– ಮಾನ್ಯ ಸಚಿವರು ಏನು ಹೇಳುತ್ತಾರೆಯೋ ಹೇಳಲಿ ಬಿಡಿ.

ಡಾ॥ ಖಮರುಲ್ ಇಸ್ಲಾಂ:– ಅಲ್ಲಿ ಸುಮಾರು 5 ಕೋಟಿ ರೂಪಾಯಿಗಳ ಕೆಲಸ ಇದೆ. 28 works ಇದೆ. All photocopies, work done, third party enquiry ಮಾಡಿ report ಕೊಟ್ಟಿದ್ದೇವೆ.

HON'BLE SPEAKER:- What does the report say?

ಡಾ॥ ಖಮರುಲ್ ಇಸ್ಲಾಂ:– ಪುನಃ DMA ಗೆ ಹೇಳಿ ಮತ್ತೆ enquiry ಮಾಡಿಸುತ್ತೇವೆ ಎಂದು ಹೇಳಿದ್ದೇನೆ. This is the first phase work of the BJP government. Ok. It's alright.

ಶ್ರೀ ಬಸವರಾಜ ಬೊಮ್ಮಾಯಿ:– ಇದರಲ್ಲಿ ಯಾರು ತಪ್ಪು ಮಾಡಿದ್ದಾರೆ ಅವರನ್ನು ಹಿಡಿಯಿರಿ. ಇದರಲ್ಲಿ ಏನು ಪಾರ್ಟಿ ಪ್ರಶ್ನೆ ಇದೆ.

ಅಧ್ಯಕ್ಷರು:– ಒಂದು ನಿಮಿಷ ತಾಳಿ. What is the report? ಆ Report ಬಂದಿದೆಯಲ್ಲಾ ಅದನ್ನು ಕೊಟ್ಟಿದ್ದೀರಾ?

ಡಾ॥ ಖಮರುಲ್ ಇಸ್ಲಾಂ:– ಮಾನ್ಯ ಅಧ್ಯಕ್ಷರೆ, Report ಕೊಟ್ಟಿದ್ದೇವೆ.

ಅಧ್ಯಕ್ಷರು:– ಆ report ನಲ್ಲಿ ಏನು ಹೇಳಿದೆ.

SRI QAMARUL ISLAM:- He is not satisfied.

HON'BLE SPEAKER:- Then? .....

SRI QAMARUL ISLAM:- The report which I have given (ಗೊಂದಲ) ...once again I will ask to enquire the matter regarding the quality of the work. ಇಲ್ಲವೆಂದರೆ ಖುದ್ದಾಗಿ ಹೋಗಿ ನಾನು ನೋಡುತ್ತೇನೆ.

HON'BLE SPEAKER:- You do one thing. ಈಗ ನಿಮ್ಮ Director of Municipal Administration ಇದ್ದಾರಲ್ಲಾ, let him go

personally. In his presence, inspect all the works and come with a report. O K.

SRI QAMARUL ISLAM:- O.K.

HON'BLE SPEAKER:- ನೋಡೋಣ let us see.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ನಿನ್ನೆಯ questions ನನ್ನದು ಇತ್ತಲ್ಲಾ?

ಅಧ್ಯಕ್ಷರು:– ರವಿ ನಿನ್ನೆಯದರ ಬಗ್ಗೆ ಇಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕು ಸಂಸದೀಯ ವ್ಯವಹಾರ ಹಾಗೂ ಶಾಸನ, ಪಶುಸಂಗೋಪನೆಯ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ: 13.02.2015ರ ಒಂಬತ್ತನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 230 ಪ್ರಶ್ನೆಗಳ ಪೈಕಿ 183 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

(ಅನುಬಂಧ–1)